ಕರ್ನಾಟಕ ಸರ್ಕಾರ

ಸಂ:ಗ್ರಾಅಪ 71 ಗ್ರಾನೀಸ(2)2015

2ನೇ ಮಹಡಿ, 'E' Block,
K.H.B Complex ಕಾವೇರಿ ಭವನ,
ಕೆ.ಜಿ.ರಸ್ತೆ, ಬೆಂಗಳೂರು–09 ದಿ:03.08.2015

**ಇವರಿಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**
ರಾಜ್ಯದ ಎಲ್ಲಾ(30) ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೆ,

ವಿಷಯ : **NRDWP – Support Activity** ಘಟಕದಡಿ ನೇಮಕಗೊಂಡಿರುವ **BRCs / CRCs**ಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/97/ಗ್ರಾನೀಸ(5)2011, ದಿ:04.07.2012.
2. ಮಾನ್ಯ ಉಚ್ಚ ನ್ಯಾಯಾಲಯದ W.P. No. 17303–17304/2012, ದಿ:06.07.2012.
3. ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು ದಿ:20.07.2012.
4. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ/93/ಗ್ರಾನೀಸ(2)2012, ದಿ:23.07.2012.
5. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/97/ಗ್ರಾನೀಸ(5)2011, ದಿ:12.06.2013.
6. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/93/ಗ್ರಾನೀಸ(2)2012, ದಿ:26.09.2013.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಗ್ರಾಅಪ/93/ಗ್ರಾನೀಸ(2)/2012, ದಿ:16.11.2013.
8. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 34 ಗ್ರಾನೀಸ(5)2014 ದಿ:25.06.2014.
9. ಹಲವಾರು ಜಿಲ್ಲಾ ಪಂಚಾಯತ್‌ಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳು ದಿ:07.04.15, 27.04.15 18.05.15, ಮತ್ತು 17.06.2015.

---

ಮೇಲ್ಕಂಡ ವಿಷಯ ಕುರಿತಂತೆ, ಉಲ್ಲೇಖಿತ (1)ರ ಸರ್ಕಾರದ ಆದೇಶ **ದಿನಾಂಕ:04.07.2012**ರಲ್ಲಿಯೇ ಈಗಾಗಲೇ ತೆಗೆದುಹಾಕಲ್ಪಟ್ಟ **BRCs / CRCs**ಗಳ ಸೇವೆಯನ್ನು **KTPP** ಕಾಯ್ದೆಯನ್ವಯ ಹೊರಗುತ್ತಿಗೆ ಆಧಾರದ ಮೇಲೆ ಮುಂದುವರೆಸಲು ಸ್ಪಷ್ಟವಾಗಿ ತಿಳಿಸಲಾಗಿದೆ.

ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಇತರ ನ್ಯಾಯಾಲಯಗಳಲ್ಲಿ ಜಿಲ್ಲಾ ಪಂಚಾಯತ್‌ಗಳು ಮತ್ತು ಸರ್ಕಾರದ ವಿರುದ್ಧ ದಾವೆ ಹೂಡಿದ್ದ **BRCs / CRCs**ಗಳ ಅರ್ಜಿಯ ಮೇಲೆ ಅವರ ಸೇವೆಯನ್ನು ಯಥಾಸ್ಥಿತಿಯಂತೆ ಯೋಜನೆ ಚಾಲ್ತಿಯಲ್ಲಿರುವವರೆಗೆ ಮಾತ್ರ ಮುಂದುವರೆಸಬೇಕೆಂದು **ದಿನಾಂಕ:20.07.2012**ರ ಉಚ್ಛ ನ್ಯಾಯಾಲಯದ ತೀರ್ಪಿನಲ್ಲಿರುತ್ತದೆ. ಆದರೆ, ಉಚ್ಛ ನ್ಯಾಯಾಲಯದ ತೀರ್ಪು ಬರುವ ಮೊದಲೇ **BRCs / CRCs**ಗಳನ್ನು ಸೇವೆಯಿಂದ ವಿಮುಕ್ತಿಗೊಳಿಸಿದ್ದ ಕಾರಣ ಪುನಃ ಸೇವೆಗೆ ತೆಗೆದುಕೊಳ್ಳಲು **"ಯಥಾಸ್ಥಿತಿ ಮುಂದುವರೆಸಲು ಆದೇಶವಾಗಿರುವ ಕಾರಣದಿಂದ"** ಸಾಧ್ಯವಾಗಿರುವುದಿಲ್ಲ. ಆದಾಗ್ಯೂ, **NRDWP–Support Activity** ಯೋಜನೆಯಡಿ ಅಗತ್ಯತೆಯನುಸಾರ ಕುಡಿಯುವ ನೀರಿನ ಗುಣಮಟ್ಟ **Pre - Monsoon & Post – Monsoon, Water Quality Testing**

...2

ಅಲ್ಲದೇ, ವರ್ಷ ಪೂರ್ಣ ನೀರು ಮತ್ತು ನೈರ್ಮಲ್ಯ ಬಾಬ್ತಿನ **HRD / IEC** ಚಟುವಟಿಕೆಗಳ ಮಾಹಿತಿ ಸಂಕಲನ / ಅಪ್‌ಲೋಡಿಂಗ್ ಸೇವೆಗಾಗಿ ಬಳಸಿಕೊಳ್ಳಲು ನಿರ್ಣಯಿಸಿ, ಸದರಿಯವರ ಸೇವೆಯನ್ನು **KTPP** ಕಾಯ್ದೆಯನ್ವಯ ಅರ್ಹ ಸಂಸ್ಥೆಗಳ **(NGO)** ಮುಖೇನ ಹೊರಗುತ್ತಿಗೆ ಆಧಾರದ ಮೇಲೆ ಸದರಿ **BRCs / CRCs**ಗಳ ಸೇವೆ ಪಡೆದುಕೊಳ್ಳಲು ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೂ ಉಲ್ಲೇಖಿತ ಸರ್ಕಾರದ ಆದೇಶ ದಿನಾಂಕ:25.06.2014ರಂದು ಸೂಚಿಸಲಾಗಿತ್ತು. ಅದರಂತೆ, ಈ ಹಿಂದೆ ಸೇವೆ ಸಲ್ಲಿಸುತ್ತಿದ್ದ, **BRCs / CRCs** ರವರ ಸೇವೆಯನ್ನು ದಿನಾಂಕ:31.03.2015ರವರೆಗೆ ಮುಂದುವರೆಸಲಾಗಿತ್ತು. ಆದರೆ ಉಲ್ಲೇಖ(9)ರಲ್ಲಿನ ಹಲವಾರು ಜಿಲ್ಲಾ ಪಂಚಾಯತ್‌ಗಳು ಪುನಃ **BRCs / CRCs**ಗಳ ಸೇವೆಯನ್ನು ಮುಂದುವರೆಸುವಂತೆ ವಿನಂತಿಸಿದ್ದಾರೆ. ಈ ಹಿನ್ನೆಲೆಯಲ್ಲಿ **BRCs / CRCs**ಗಳ ಸೇವೆಯನ್ನು ಅವರುಗಳಿಗೆ ತೊಂದರೆಯಾಗದಂತೆ ಸೇವೆಯನ್ನು ಮುಂದುವರಿಸಲು ಆಯ್ಕೆಯಾದ ಆಯಾ ಹೊರಗುತ್ತಿಗೆ ಸಂಸ್ಥೆಗಳೊಂದಿಗೆ **MoU** ಮಾಡಿಕೊಳ್ಳಲು ಅನುಕೂಲವಾಗುವಂತೆ ಟೆಂಡರ್ ನಿಬಂಧನೆಯಲ್ಲಿಯೇ ಈ ಅಂಶವನ್ನು ಅಳವಡಿಸಲು ಸಹ ಈಗಾಗಲೇ ತಿಳಿಸಲಾಗಿದೆ. ಅಂತೆಯೇ, ಎಲ್ಲಾ ಜಿಲ್ಲಾ ಪಂಚಾಯತ್‌ನಲ್ಲಿ ಸೇವೆ ಸಲ್ಲಿಸುತ್ತಿರುವ **BRCs / CRCs**ಗಳ ಸೇವೆಯನ್ನು ಪಡೆದುಕೊಳ್ಳಲು ಉಚ್ಛ ನ್ಯಾಯಾಲಯದ ಆದೇಶದಂತೆ ತಕ್ಷಣ ಸದರಿಯವರ ಸೇವೆಯನ್ನು ಮುಂದಿನ ಆದೇಶದವರೆಗೆ ಮುಂದುವರಿಸಲು ಕ್ರಮವಹಿಸಬೇಕೆಂದು ಕೋರಿದೆ.

ತಮ್ಮ ವಿಶ್ವಾಸಿ,

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

**ಪ್ರತಿಯನ್ನು:**
ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, **ಬೆಂಗಳೂರು-09** ಇವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.